# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ

ಆಡಳಿತ (Infra) ಸಂಖ್ಯೆ: 9434 /2026 ದಿನಾಂಕ: 18/09/2026

## ಟೆಂಡರು ಪ್ರಕಟಣೆ / Tender Notification

**ವಿಷಯ :** ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹವನ್ನು ನಡೆಸಲು ಟೆಂಡರ್‌ನ್ನು ಆಹ್ವಾನಿಸಿದ ಬಗ್ಗೆ.

**********

ಈ ಮೂಲಕ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಬೆಳಗಾವಿ ಇವರು ಹೊರಡಿಸುವ ಅಧಿಸೂಚನೆ ಏನೆಂದರೆ; ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹವನ್ನು /ಕ್ಯಾಂಟೀನ್ ಪ್ರತಿ ತಿಂಗಳ ಬಾಡಿಗೆ ಆಧಾರದ ಮೇಲೆ ನಡೆಸಲು ಟೆಂಡರು/ಕೊಟೇಷನ್‌ಗಳನ್ನು ನುರಿತ ಹೊಟೇಲ್ ಉದ್ದಿಮೆದಾರರಿಂದ, ಮುಚ್ಚಿದ ಲಕೋಟೆಗಳಲ್ಲಿ (sealed Tender/Quotations) ಆಹ್ವಾನಿಸಲಾಗಿದ್ದು. ಅರ್ಜಿ ನಮೂನೆ, ಷರತ್ತುಗಳು ಹಾಗೂ ನಿಬಂಧನೆಗಳನ್ನು ಬೆಳಗಾವಿ ಜಿಲ್ಲಾ ನ್ಯಾಯಾಲಯದ ವೈಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ.

Website: https://belagavi.dcourts.gov.in/notice-category/tenders

ಅರ್ಜಿಯನ್ನು ಸಲ್ಲಿಸಲು ಇಚ್ಚಿಸುವವರು, ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹವನ್ನು ವೈಯಕ್ತಿಕವಾಗಿ ವೀಕ್ಷಿಸಬಹುದು. ಮುಚ್ಚಿದ ಲಕೋಟೆಗಳನ್ನು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬೆಳಗಾವಿ ಇವರಿಗೆ ದಿನಾಂಕ: **07/10/2026** ರಂದು ಸಾಯಂಕಾಲ **5.00** ಗಂಟೆಯ ಒಳಗೆ ಸಲ್ಲಿಸತಕ್ಕದ್ದು, ನಂತರ ತಲುಪಿದ ಲಕೋಟೆಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.

ಲಕೋಟೆಯ ಮೇಲೆ "ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹ ನಡೆಸುವ ಸಲುವಾಗಿ ಟೆಂಡರು" ಎಂದು ನಮೂದಿಸತಕ್ಕದ್ದು. ಸ್ವೀಕರಿಸಲಾದ ಟೆಂಡರ್‌ಗಳನ್ನು /ಕೊಟೇಷನ್‌ಗಳನ್ನು, ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಬೆಳಗಾವಿ ಇವರ ಕೊಠಡಿಯಲ್ಲಿ ದಿನಾಂಕ: **09/10/2026** ರಂದು ಸಾಯಂಕಾಲ **5.00** ಗಂಟೆಗೆ ತೆರೆಯಲಾಗುವುದು.

18/9/14

**ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,**
**ಬೆಳಗಾವಿ.**

PRL. DISTRICT & SESSIONS JUDGE
BELAGAVI

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ

**ಟೆಂಡರು ಪ್ರಕಟಣೆ ದಿನಾಂಕ: 18.09.2026**

**ವಿಷಯ :** ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹವನ್ನು ಬಾಡಿಗೆ ಆಧಾರದ ಮೇಲೆ ನಡೆಸಲು ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ :**
1. ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಸ್ಮತ್ತೋಲೆ ಸಂಖ್ಯೆ. LCA-I. 200/2000, Dated 13.06.2005.
2. ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ. DJA 793/2025 Dated 10.09.2026.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ, ಚಿಕ್ಕೋಡಿ-ವಿಭಾಗ, ಚಿಕ್ಕೋಡಿ ಪತ್ರ ಸಂಖ್ಯೆ. Dated 08.04.2026.

*********

ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹವನ್ನು ನಡೆಸಲು ಈ ಕೆಳಗೆ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಲೈಸನ್ಸ್‌ನ್ನು ನೀಡಲು ಉದ್ದೇಶಿಸಿದ್ದು, ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವವರು ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ (ಬೆರಳಚ್ಚು ಮಾಡಿಸಿ) ತಮ್ಮ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಸ್ಪಷ್ಟವಾಗಿ ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ, ಜಿಲ್ಲಾ ನ್ಯಾಯಾಲಯ ಆವರಣ, ಬೆಳಗಾವಿ ಈ ವಿಳಾಸಕ್ಕೆ ದಿ: 07/10/2026 ರ ಸಾಯಂಕಾಲ 05.00 ಘಂಟೆಯ** ಒಳಗಾಗಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು:**

1. ಆಹಾರದ ಗುಣಮಟ್ಟ, ಆಹಾರ ಪದಾರ್ಥಗಳು ಹಾಗೂ ಕೆಲಸದ ಸ್ವಚ್ಛತೆ ಬಗ್ಗೆ ತಪಾಸಣೆಯನ್ನು ಕಾಲಕಾಲಕ್ಕೆ ಸಂಬಂಧಿಸಿದ ಇಲಾಖೆಯಿಂದ ಮಾಡಿಸುವುದು.
2. ಉಪಹಾರ ಗೃಹವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯವರಿಂದ ಲೈಸನ್ಸ ಅನ್ನು ಸ್ವಂತ ಹೆಸರಿನಲ್ಲಿ ಹೊಂದಿರತಕ್ಕದ್ದು.
3. ಉಪಹಾರ ಗೃಹದಲ್ಲಿ ಸಸ್ಯಹಾರಿ ಆಹಾರ ಪದಾರ್ಥಗಳನ್ನು ಮಾತ್ರ ತಯಾರಿಸತಕ್ಕದ್ದು.
4. ಉದ್ಯೋಗಕ್ಕೆ ಸಂಬಂಧಿಸಿದ ಎಲ್ಲಾ ತೆರಿಗೆಗಳನ್ನು ಅರ್ಜಿದಾರರೇ ಕಟ್ಟತಕ್ಕದ್ದು.
5. ರುಚಿಯಾದ/ ಗುಣಮಟ್ಟದ ಆಹಾರ ಪದಾರ್ಥಗಳನ್ನು ತಯಾರಿಸುವುದು ಹಾಗೂ ಉತ್ತಮವಾದ ಪೀಠೋಪಕರಣ / ಪಾತ್ರೆಗಳನ್ನು ಬಳಸುವುದು.

6. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ವ್ಯವಹಾರಕ್ಕೆ ಅಗತ್ಯವಾದ ನೀರಿನ ವ್ಯವಸ್ಥೆಯನ್ನು ತಮ್ಮ ಖರ್ಚಿನಲ್ಲಿ ತಾವೇ ಮಾಡಿಕೊಳ್ಳತಕ್ಕದ್ದು.

7. ಮಂಜೂರಾತಿ ಪಡೆದ ಅರ್ಜಿದಾರರು, ಪ್ರತ್ಯೇಕವಾದ ಮೀಟರಿನ ರೀಡಿಂಗ್ ಅನ್ವಯ ಮಾಸಿಕ ವಿದ್ಯುತ್ ಬಿಲ್ಲನ್ನು ಹಾಗೂ ತ್ಯಾಜ್ಯ ವಿಲೇವಾರಿ ವೆಚ್ಚವನ್ನು ತಾವೇ ಭರಿಸತಕ್ಕದ್ದು.

8. ಉಪಹಾರ ಗೃಹ ಮಂಜೂರಾದವರು, ಬೇರೆಯವರಿಗೆ ಉಪ ಬಾಡಿಗೆ ಹಾಗೂ ಪರಭಾರೆ ಮಾಡುವುದನ್ನು ನಿಷೇಧಿಸಿದೆ.

9. ಉಪಹಾರ ಗೃಹ ಮಂಜೂರಾದವರು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸಬೇಕು. ಅನ್ಯ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

10. ಉಪಹಾರ ಗೃಹ ಮಂಜೂರಾದವರು, ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 6.30 ಗಂಟೆಯವರೆಗೆ ಮಾತ್ರ ಉಪಹಾರ ಗೃಹ ತೆರೆಯತಕ್ಕದ್ದು.

11. ಉಪಹಾರ ಗೃಹದ ಒಪ್ಪಂದವಾದ ನಂತರ ಯಾವುದೇ ಕಾರಣಕ್ಕೆ ಬಾಡಿಗೆ ದರಗಳಲ್ಲಿ ಬದಲಾವಣೆ ಮಾಡಬೇಕೆನ್ನುವ ಯಾವುದೇ ಕೋರಿಕೆಗಳನ್ನು ಮನ್ನಿಸಲಾಗುವುದಿಲ್ಲ.

12. ಉಪಹಾರ ಗೃಹ ಮಂಜೂರಾದವರು ಆ ಕಟ್ಟಡದಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಕೂಡದು. ಉಪಹಾರ ಗೃಹ ಅಥವಾ ಅದರ ಕಟಡಕ್ಕೆ ಯಾವುದೇ ರೀತಿಯಲ್ಲಿ ಹಾನಿ ಮಾಡಿದರೆ ಅಥವಾ ಇನ್ನಿತರೆ ನಷ್ಟವಾದಲ್ಲಿ ಅಂತಹ ನಷ್ಟ ಭರ್ತಿ ಹಣವನ್ನು ಅರ್ಜಿದಾರರ ಭದ್ರತಾ ಠೇವಣಿಯಿಂದ ಕಡಿತಗೊಳಿಸಲಾಗುವುದು, ಕಡಿಮೆಯಾದಲ್ಲಿ, ಬಾಕಿ ಮೊತ್ತವನ್ನು ವಸೂಲು ಮಾಡಲಾಗುವುದು.

13. ಉಪಹಾರ ಗೃಹ ಮಂಜೂರಾದವರು ಅಗತ್ಯ ಸುರಕ್ಷಾ ಕ್ರಮಗಳನ್ನು ಅವಶ್ಯಕವಾಗಿ ತಮ್ಮ ಖರ್ಚಿನಲ್ಲಿ ಅಳವಡಿಸಿಕೊಳ್ಳತಕ್ಕದ್ದು.

14. ಮಂಜೂರಾತಿ ಪಡೆದ ಮೇಲೆ ನಂತರ ಉಪಹಾರ ಗೃಹ ನಿರ್ವಹಿಸಲು ಅಸಮರ್ಥರಾದಲ್ಲಿ, ಭದ್ರತಾ ಠೇವಣಿಯಿಂದ ಎರಡು ತಿಂಗಳ ಬಾಡಿಗೆಯನ್ನು ಕಡಿತಗೊಳಿಸಲಾಗುವುದು,

15. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು, ಭದ್ರತಾ ಠೇವಣಿಯಾಗಿ ಎರಡು ತಿಂಗಳ ಬಾಡಿಗೆಯನ್ನು ಠೇವಣಿಯಾಗಿ ಡಿ.ಡಿ. ಮುಖಾಂತರ ಹಿರಿಯ ಸಿವಿಲ್ ನ್ಯಾಯಾಧೀಶರು, ನಿಪ್ಪಾಣಿ, ಇವರ ಹೆಸರಿನಲ್ಲಿ ಒಪ್ಪಂದ/ಅಗ್ರಿಮೆಂಟ್ ಮಾಡಿಕೊಳ್ಳುವ ಕಾಲಕ್ಕೆ ಸಲ್ಲಿಸಬೇಕು. ಭದ್ರತಾ ಠೇವಣಿ ಹಣಕ್ಕೆ ಬಡ್ಡಿ ಕೊಡಲಾಗುವುದಿಲ್ಲ. ಠೇವಣಿ ಹಣವನ್ನು ಅವಧಿ ಮುಗಿದ ನಂತರ ಮರಳಿಸಲಾಗುವುದು.

16. ಅರ್ಜಿದಾರರು, ಉಪಹಾರ ಗೃಹದ ಮಂಜೂರಾತಿಯ ಸೂಚನೆ ಅಂಚೆ ಮೂಲಕ ಸ್ವೀಕೃತಿಯಾದ ಮೂರು ದಿನಗಳ ಒಳಗೆ ಹಿರಿಯ ಸಿವಿಲ್ ನ್ಯಾಯಾಧೀಶರು, ನಿಪ್ಪಾಣಿ, ಇವರ ಹುದ್ದೆಯ ಹೆಸರಿಗೆ ನ್ಯಾಯಾಲಯ ಕಚೇರಿಯ ಲೆಕ್ಕಪತ್ರ ವಿಭಾಗದಲ್ಲಿ 03 ವರ್ಷದ ಅವಧಿಗೆ ಒಪ್ಪಂದ ಪತ್ರವನ್ನು ಮಾಡಿಕೊಳ್ಳಬೇಕು ಹಾಗೂ ಅದೇ ದಿನ ಠೇವಣಿ ಹಣವನ್ನು ಸಂದಾಯ ಮಾಡತಕ್ಕದ್ದು.

17. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳನ್ನು, ಆಧಾರ್ ಚೀಟಿ ಹಾಗೂ ಮತದಾರರ ಚೀಟಿಯ ಪ್ರತಿಯನ್ನು ಹಾಜರುಪಡಿಸಬೇಕು.

18. ಉಪಹಾರ ಗೃಹದ ಮಂಜೂರಾತಿ ಪಡೆದ ಅರ್ಜಿದಾರರು, ಉಪಹಾರ ಗೃಹವನ್ನು ಸ್ವಚ್ಛವಾಗಿ ಇಟ್ಟುಕೊಳ್ಳತಕ್ಕದ್ದು ಹಾಗೂ ಸುತ್ತಮುತ್ತಲಿನ ಪರಿಸರ ನೈರ್ಮಲ್ಯ ಕಾಪಾಡಿಕೊಳ್ಳತಕ್ಕದ್ದು, ಕಸ ವಿಲೇವಾರಿಯ ಬಗ್ಗೆ, ಸ್ಥಳೀಯ ನಗರ ಪಾಲಿಕೆಯ ನಿಯಮಗಳನ್ನು ಪಾಲಿಸತಕ್ಕದ್ದು.

19. ಉಪಹಾರ ಗೃಹ ಮಂಜೂರಾದವರು ಮಾಸಿಕ ಲೈಸನ್ಸ್ ಶುಲ್ಕವನ್ನು / ಬಾಡಿಗೆಯನ್ನು ಪ್ರತಿ ತಿಂಗಳ 10 ನೇ ತಾರೀಖಿನ ಒಳಗೆ ಹಿರಿಯ ಸಿವಿಲ್ ನ್ಯಾಯಾಧೀಶರು, ನಿಪ್ಪಾಣಿ ರವರ ಕಚೇರಿಯ ಲೆಕ್ಕಪತ್ರ ವಿಭಾಗದಲ್ಲಿ ಪಾವತಿಸತಕ್ಕದ್ದು.

20. ಉಪಹಾರ ಗೃಹ ಮಂಜೂರಾದವರು ಖಾಲಿ ಮಾಡುವಾಗ ಅವರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸುವಾಗ ಅರ್ಜಿದಾರರಿಂದ ಬಾಡಿಗೆಯ ಹಣ ಅಥವಾ ವಿದ್ಯುತ್ ಬಿಲ್ಲಿನ ಮೊತ್ತ ಬಾಕಿ ಇದ್ದಲ್ಲಿ ಮೇಲಿನ ಠೇವಣಿಯ ಮೊತ್ತದಲ್ಲಿ ಕಡಿತಗೊಳಿಸಲಾಗುವುದು.

21. ಉಪಹಾರ ಗೃಹದ ಮಂಜೂರಾತಿಯು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಇವರ ವಿವೇಚನಾ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

22. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಇವರಿಗೆ ಸ್ಥಳದ ಅವಶ್ಯಕತೆ ಕಂಡು ಬಂದಾಗ ಅವರು ನೋಟಿಸು ಕಳುಹಿಸಿದ 60 ದಿನಗಳೊಳಗಾಗಿ (ಎರಡು ತಿಂಗಳು) ಉಪಹಾರ ಗೃಹ ಮಂಜೂರಾತಿ ಪಡೆದವರು ಖಾಲಿ ಮಾಡಿಕೊಡತಕ್ಕದ್ದು.

23. ಉಪಹಾರ ಗೃಹ ಮಂಜೂರಾತಿ ಪಡೆದವರು, ನ್ಯಾಯಾಲಯದ ಆವರಣದಲ್ಲಿ ಯಾವುದೆ ವ್ಯಕ್ತಿಗಳಿಗೆ, ಆಸ್ತಿಗೆ ಹಾನಿಯುಂಟು ಮಾಡಬಲ್ಲ, ಅಗ್ನಿ ಸಂಭವಿಸಬಲ್ಲ, ಸಾರ್ವಜನಿಕರಿಗೆ ತೊಂದರೆ ನೀಡುವಂತಹ, ಉಪದ್ರವಕ್ಕೆ ಕಾರಣವಾಗುವ ಹಾಗೂ ಕಾನೂನಾತ್ಮಕವಾಗಿ ನಿಷೇಧಿಸಲಾದ ಯಾವುದೇ ವಸ್ತುಗಳನ್ನು ಶೇಖರಿಸಿಡಬಾರದು.

24. ಉಪಹಾರ ಗೃಹ ಮಂಜೂರಾತಿಯ ನಂತರ ಯಾವದೇ ಅವ್ಯವಹಾರಗಳಲ್ಲಿ ಅಥವಾ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವರೆಂದು ಕಂಡು ಬಂದಲ್ಲಿ ಸದರಿಯವರ ಒಪ್ಪಂದವನ್ನು ರದ್ದುಗೊಳಿಸಿ ಭದ್ರತಾ ಠೇವಣಿಯನ್ನು ಹಾಗೂ ಮುಂಗಡ ಬಾಡಿಗೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಅವರನ್ನು ಉಪಹಾರ ಗೃಹದಿಂದ ಹೊರಕ್ಕೆ ಹಾಕಲಾಗುವುದು.

25. ಉಪಹಾರ ಗೃಹ ಮಂಜೂರಾತಿ ಪಡೆದವರು ಈ ಮೇಲೆ ತಿಳಿಸಿದ ಕರಾರುಗಳನ್ನು ಉಲ್ಲಂಘಿಸಿದಲ್ಲಿ ಮತ್ತು ಉಪಹಾರ ಗೃಹ ನಿರ್ವಹಣೆಯಲ್ಲಿ ವ್ಯತಿರಿಕ್ತವಾಗಿ ಯಾವುದೇ ದೂರು ದುಮ್ಮಾನುಗಳು ಬಂದಲ್ಲಿ ಅವು ಸತ್ಯವೆಂದು ಕಂಡು ಬಂದಲ್ಲಿ ಕೂಡಲೇ ಉಪಹಾರ ಗೃಹ ನಡೆಸಲು ಕೊಟ್ಟ ಲೈಸನ್ಸ್‌ನ್ನು ರದ್ದು ಪಡಿಸಲಾಗುವುದು.

26. ಉಪಹಾರ ಗೃಹ / ಕ್ಯಾಂಟೀನ್ ನಿಷೇಧಿತ ಪದಾರ್ಥಗಳನ್ನು (ಗುಟಕಾ, ತಂಬಾಕು, ಸಿಗರೇಟ್) ಮಾರಾಟ ಮಾಡುವಂತಿಲ್ಲ.

27. ಕರ್ನಾಟಕ ಸರ್ಕಾರದ ಹಾಗೂ ಮಾನ್ಯ ಉಚ್ಚ ನ್ಯಾಯಾಲಯ ಹೊರಡಿಸಿದ ಇತರೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಹೋಗತಕ್ಕದ್ದು ಹಾಗೂ ಉಪಹಾರ ಗೃಹದಲ್ಲಿ ಕೆಲಸ ನಿರ್ವಹಿಸುವ ವ್ಯಕ್ತಿಗಳು ಯಾವುದೇ ಕಾಯಿಲೆಗಳಿಂದ ಬಳಲುತ್ತಿರಬಾರದು.

28. ರೂ. 15,000/- ಕ್ಕಿಂತ ಕಡಿಮೆಯಿಲ್ಲದಂತೆ ಅತಿ ಹೆಚ್ಚು ಮಾಸಿಕ ಬಾಡಿಗೆ ಪಾವತಿಸುವ ಅರ್ಜಿಗಳನ್ನು ಪರಿಗಣಿಸಿ ಅತಿ ಹೆಚ್ಚು ಹಣವನ್ನು ಬಿಡ್ ಮಾಡಿದವರಿಗೆ ಉಪಹಾರ ಗೃಹವನ್ನು ಮಂಜೂರು ಮಾಡಲಾಗುವುದು.

29. ಉಪಹಾರ ಗೃಹವನ್ನು ಮಂಜೂರು ಪಡೆದವರು ತಮ್ಮ ಬಿಡ್ ಮೊತ್ತದ ಎರಡು ಪಟ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ನಿಭಂದನೆ 16 ರಂತೆ ಸಂದಾಯ ಮಾಡತಕ್ಕದ್ದು.

6/8/14

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬೆಳಗಾವಿ.**

PRL. DISTRICT & SESSIONS JUDGE
BELAGAVI

# ಅರ್ಜಿ ನಮೂನೆ

ಗೆ,

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಜಿಲ್ಲಾ ನ್ಯಾಯಾಲಯ ಆವರಣ,
**ಬೆಳಗಾವಿ – 590 001.**

ಅರ್ಜಿದಾರರ ಭಾವಚಿತ್ರ

ಮಾನ್ಯರೇ,

ನಾನು/ನಾವು, ನಿಪ್ಪಾಣಿ ನ್ಯಾಯಾಲಯ ಆವರಣದಲ್ಲಿರುವ ಉಪಹಾರ ಗೃಹ ನಡೆಸುವುದಕ್ಕೆ ಸಂಬಂಧಪಟ್ಟಂತೆ, ಈ ಮೂಲಕ ಸಲ್ಲಿಸುವ ವಿವರಗಳು ಈ ಕೆಳಗಿನಂತೆ ಇರುತ್ತವೆ. ನಾನು ಇದಕ್ಕೆ ಸಂಬಂಧಿಸಿದ ಷರತ್ತುಗಳು ಹಾಗೂ ನಿಬಂಧನೆಗಳನ್ನು ಪಾಲಿಸುತ್ತೇನೆ. ಅದರಂತೆ ಒಪ್ಪಂದವನ್ನು ಮಾಡಿಕೊಳ್ಳಲು ತಯಾರಿರುತ್ತೇನೆ.

| | | |
|---|---|---|
| 1 | ಅರ್ಜಿದಾರರ ಹೆಸರು/ಉದ್ದಿಮೆದಾರರ/ ಕಂಪನಿಯ/ಪಾಲುದಾರಿಕೆಯ ಸಂಸ್ಥೆಯ ಹೆಸರು /ಪ್ರತಿನಿಧಿಸುವವರ ಹೆಸರು. **(ದಪ್ಪ ಅಕ್ಷರಗಳಲ್ಲಿ)** | |
| 2 | ಪೂರ್ಣ ವಿಳಾಸ | |
| 3 | ದೂರವಾಣಿ ಸಂಖ್ಯೆ | |
| 4 | ಮೊಬೈಲ್ ಸಂಖ್ಯೆ | |
| 5 | ಈ-ಮೇಲ್ ವಿಳಾಸ | |
| 6 | ಪ್ಯಾನ್ ನಂಬರ (ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು) | |
| 7 | ಆಧಾರ ಸಂಖ್ಯೆ (ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು) | |
| 8 | ಇತರ ವಿವರಣೆ (ಹೊಟೇಲ್ ಉದ್ದಿಮೆಯ ಅನುಭವ/ ಸರ್ಕಾರದ ಇತರ ಇಲಾಖೆಗಳಲ್ಲಿ ಹೊಟೇಲ್‌ಗಳನ್ನು ನಡೆಸಿದ ಬಗ್ಗೆ ಅನುಭವ ಇದ್ದಲ್ಲಿ ವಿವರಣೆ ನೀಡುವುದು) | |
| 9 | ಹೊಟೇಲ್ ಉದ್ಯಮದ ನೊಂದಣಿ ಸಂಖ್ಯೆ (ನೊಂದಣಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು) | |
| 10 | ಜಿ.ಎಸ್.ಟಿ. ನೊಂದಣಿ ಸಂಖ್ಯೆ (ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು) | |
| 11 | ಸ್ವ ಉದ್ಘೋಷಣೆ. (ಯಾವುದೇ ತರಹದ ಕಪ್ಪು ಚುಕ್ಕೆಗಳು ಇರದಿರುವ ಬಗ್ಗೆ ವಿವರಣೆ) ಸಲ್ಲಿಸುವುದು. | |
| 12 | ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪತ್ರಗಳನ್ನು ಲಗತ್ತಿಸುವುದು. | |
| 13 | ಹೊಟೇಲ್ ಉದ್ಯಮ ನಡೆಸುತ್ತಿದ್ದರೆ ಅದರ ವಿವರಗಳನ್ನು ಸಲ್ಲಿಸುವುದು. | |
| 14 | ಪ್ರತಿ ತಿಂಗಳು ಎಷ್ಟು ಬಾಡಿಗೆ ಹಣ ನೀಡುತ್ತೀರಿ ಎಂಬ ವಿವರ ಸಲ್ಲಿಸುವುದು. | |

(ಅರ್ಜಿ ನಮೂನೆಯ ವಿಷಯ / ವಿವರಗಳು ಹೆಚ್ಚಿದ್ದಲ್ಲಿ ಪ್ರತ್ಯೇಕವಾಗಿ ಬೆರಳಚ್ಚು ಮಾಡಿಸಬಹುದು.)

**ಅರ್ಜಿದಾರನಾದ/ಅರ್ಜಿದಾರರಾದ ನಾನು/ನಾವು ಈ ಮೂಲಕ ಉದ್ಘೋಷಿಸುವುದೇನೆಂದರೆ ಮೇಲೆ ಸಲ್ಲಿಸಿದ ವಿವರಣೆ ನಿಜವಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.**

**ಸ್ಥಳ :**

**ದಿನಾಂಕ:** / /

**ಅರ್ಜಿದಾರರ ಸಹಿ**

Azadi Ka Amrit Mahotsav

ಆಡಳಿತ (Infra) ಸಂಖ್ಯೆ: 9434 /2026 **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ಬೆಳಗಾವಿ.** ದಿನಾಂಕ: **18/09/2026**

# ಟೆಂಡರು ಪ್ರಕಟಣೆ / Tender Notification

**ಪ್ರತಿಗಳು : ಸಾರ್ವಜನಿಕರ ಮಾಹಿತಿಗಾಗಿ ನಿಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿನಂತಿ.**

1. ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ, ನಿಪ್ಪಾಣಿ.
2. ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ, ನಿಪ್ಪಾಣಿ.
3. ಜಿಲ್ಲಾಧಿಕಾರಿಗಳು, ಬೆಳಗಾವಿ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ.
5. ಮುಖ್ಯ ಅಧಿಕಾರಿಗಳು, ನಗರ ಪಾಲಿಕೆ, ನಿಪ್ಪಾಣಿ.
6. ಕಾರ್ಯನಿರ್ವಾಹಕ ಅಭಿಯಂತರರು, ಲೋ, ಬಂ. ಮತ್ತು ಒ.ಜ.ಸಾ. ಇಲಾಖೆ, ಚಿಕ್ಕೋಡಿ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋ, ಬಂ. ಮತ್ತು ಒ.ಜ.ಸಾ. ಇಲಾಖೆ, ಚಿಕ್ಕೋಡಿ/ನಿಪ್ಪಾಣಿ.
8. ತಹಶೀಲ್ದಾರ್‌ರವರ ಕಚೇರಿ, ನಿಪ್ಪಾಣಿ.
9. ಸಹಾಯಕ ನಿರ್ದೇಶಕರು, ಸಾರ್ವಜನಿಕ ಮತ್ತು ಸಂಪರ್ಕ ಇಲಾಖೆ, ಬೆಳಗಾವಿ ರವರ ಕಚೇರಿ, **ಸ್ಥಳೀಯ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ವಿನಂತಿ.**
10. ಅಧ್ಯಕ್ಷರು/ಕಾರ್ಯದರ್ಶಿಗಳು, ವಕೀಲರ ಸಂಘ, ನಿಪ್ಪಾಣಿ.
11. ಸಾಫ್ಟ್‌ವೇರ್ ತಂತ್ರಜ್ಞರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ, **ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಕೋರಿ.**

ನ್ಯಾಯಾಲಯದ ಆದೇಶದ ಮೇರೆಗೆ,

18/9/26

ಮುಖ್ಯ ಆಡಳಿತಾಧಿಕಾರಿಗಳು,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಳಗಾವಿ.

Chief Administrative Officer
District Court Belagavi